ಅಂತರ ರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಗೆ ಖರೀದಿಸಿದ ಉಪಕರಣಗಳು

1030 (1471) ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿದ ಅಂತರ್ ರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಗಾಗಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆ ಎಷ್ಟು ಮೊತ್ತದ ಉಪಕರಣಗಳನ್ನು ಖರೀದಿಸಿದೆ; ಪ್ರತಿ ಉಪಕರಣದ ವಿವರ ನೀಡುವುದು?

ಆ) ಖರೀದಿಗಾಗಿ ಟೆಂಡರ್ ಕರೆಯಲಾಗಿದ್ದಿತೆ? ಇಲ್ಲವಾದಲ್ಲಿ ಕಾರಣಗಳೇನು?

ಇ) ಬೆಂಗಳೂರಿನ ಹರ್ಕ್ಯುಲಿಸ್ ಸ್ಪೋರ್ಟ್ಸ್ ಸಂಸ್ಥೆಯಿಂದಲೇ ನಿರಂತರವಾಗಿ ಇಲಾಖೆ ಉಪಕರಣಗಳನ್ನು ಖರೀದಿಸುತ್ತಿರುವುದಕ್ಕೆ ಕಾರಣವೇನು?

ಈ) ಈ ಸಂಸ್ಥೆಯೊಂದಿಗೆ ಇಲಾಖಾಧಿಕಾರಿಗಳು ಶಾಮೀಲಾಗಿ ಖರೀದಿ ವ್ಯವಹಾರದಲ್ಲಿ ಕೋಟ್ಯಾಂತರ ರೂ.ಗಳ ಅವ್ಯವಹಾರಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಯವಜನಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು): ಅ) 1999-2000 ಮತ್ತು 2000-2001ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಯಾವುದೇ ಅಂತರ್ ರಾಷ್ಟ್ರೀಯ ಪಂದ್ಯಾವಳಿ ನಡೆದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಇಲಾಖೆಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಮಾರ್ಕೆಟಿಂಗ್ ನಿಗಮ, ಇವರಿಂದ ಸಾಮಗ್ರಿ ಖರೀದಿಸುತ್ತಿದ್ದು, ಮೆ|| ಹರ್ಕ್ಯುಲಿಸ್ ಸ್ಪೋರ್ಟ್ಸ್ ಇವರು ನೊಂದಾಯಿತ ಸಂಸ್ಥೆಯಾಗಿದ್ದು, ನೇರವಾಗಿ ಯಾವುದೇ ಕೋರಿಕೆ ಪತ್ರ ಅಥವಾ ಹಣ ನೀಡಿಕೆಯನ್ನು ಹರ್ಕ್ಯುಲಿಸ್ ಸ್ಪೋರ್ಟ್ಸ್‌ನೊಂದಿಗೆ ಮಾಡಿರುವುದಿಲ್ಲ ಹಣ ನೀಡುವಿಕೆ ಮತ್ತು ಸರಬರಾಜು ಬೇಡಿಕೆಗಳನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರ್ಕೆಟಿಂಗ್ ನಿಗಮ, ಇವರ ಮುಖಾಂತರವೇ ನಡೆಸಲಾಗುತ್ತಿದೆ.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಚಿಂತಾಮಣಿ ನಗರದ ಬಾಲಕಿಯರ ಪದವಿ ಪೂರ್ವ ಕಾಲೇಜು ಕಟ್ಟಡ ಕುರಿತು

1031 (1077) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರದ ಬಾಲಕಿಯರ ಪದವಿ ಪೂರ್ವ ಕಾಲೇಜಿಗೆ ಕಟ್ಟಡ ಮಂಜೂರಾಗಿ ಐದು ವರ್ಷಗಳಾಗಿದ್ದು ಕೆಲಸ ಅರ್ಧ ಆಗಿದ್ದು ಪೂರೈಸದೆ ನಿಂತಿರುವ ವಿಷಯ ಮತ್ತು ವಿದ್ಯಾಭ್ಯಾಸಕ್ಕೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಟ್ಟಡವನ್ನು ಪೂರ್ಣ ಮಾಡಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಅನುದಾನದ ಕೊರತೆಯಿಂದ ಕಾಮಗಾರಿ ವಿಳಂಬವಾಗಿರುತ್ತದೆ. 2001-2002ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಂತಾಮಣಿಯಲ್ಲಿ ರಸ್ತೆಗಾಗಿ ನಬಾರ್ಡ್‌ನಿಂದ ಪಡೆದ ಸಾಲ

1032 (1078) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 1997-98 ಮತ್ತು 1998-99ರಲ್ಲಿ ನಬಾರ್ಡ್‌ನಿಂದ ವಿವಿಧ ರಸ್ತೆ ಕಾಮಗಾರಿಗಳಿಗಾಗಿ ಪಡೆದ ಸಾಲ ಎಷ್ಟು; ಉಪಯೋಗ ಮಾಡಿರುವ ಮೊಬಲಗು ಎಷ್ಟು; ಖರ್ಚಾದ ಹಣಕ್ಕೆ ತಪಸೀಲು ವಿವರ ಒದಗಿಸುವುದು

ಆ) ಕೆಲವು ರಸ್ತೆಗಳಿಗೆ ನಬಾರ್ಡ್ ಹಣ ಮಂಜೂರಾಗಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಗಂದಿದೆಯೇ;

ಇ) ಬಂದಿದ್ದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಚಿಂತಾಮಣಿ ಕ್ಷೇತ್ರದಲ್ಲಿ 97-98 ಮತ್ತು 98-99ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಕೆಳಕಂಡಂತೆ ಇದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷರೂಗಳಲ್ಲಿ	ನಬಾರ್ಡ್ ಸಾಲದ ಮೊತ್ತ	ಇಲ್ಲಿಯವರೆಗೆ ಮಾಡಲಾದಷ್ಟು ಲಕ್ಷರೂಗಳಲ್ಲಿ	ಪ್ರಸ್ತುತ ಹಂತ
1	2	3	4	5	6
	97-98ರ ಆರ್‌ಐಡಿಪಿಪ್ 3				
1.	ಬಿ.ಕೆ. ರಸ್ತೆಯಿಂದ ನೆಲ್ಲಪಲ್ಲಿಗೆ, ನಂದಿಗನಹಳ್ಳಿ ಮೂಲಕ ಸೇರುವ ರಸ್ತೆ	30.00	27.00	22.31	ಪೂರ್ಣಗೊಂಡಿದೆ
	98-99ರ ಆರ್‌ಡಿಪಿಪ್ 4				